**<u>ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾದಂ., ರವರ ನ್ಯಾಯಾಲಯ, ತರೀಕೆರೆ</u>**

**<u>ಸಿ.ಸಿ.ನಂಃ 1330/2023</u>**

**<u>ಫಿರ್ಯಾದುದಾರರುಃ</u>** ಸರ್ಕಾರದ ಪರವಾಗಿ ಅಜ್ಜಂಪುರ ಪೊಲೀಸರು

-: **ವಿರುದ್ಧ** :-

**<u>ಆರೋಪಿಃ</u>**

1. ಶ್ರೀ ಪಿ.ಕೆ. ಮಹೇಶ್ವರಪ್ಪ,
ಬಿನ್ ಶ್ರೀ ಕಲ್ಲಪ್ಪ,
45 ವರ್ಷಗಳು,
ವಾಸಃ ಹೊಸಳ್ಳಿ ಗ್ರಾಮ,
ತರೀಕೆರೆ ತಾಲ್ಲೂಕು.

2. ಶ್ರೀಮತಿ ಓಂಕಾರಮ್ಮ,
ಕೋಂ ಶ್ರೀ ಬಸವರಾಜಪ್ಪ,
60 ವರ್ಷಗಳು,
ವಾಸಃ ಹೊಸಳ್ಳಿ ಗ್ರಾಮ,
ತರೀಕೆರೆ ತಾಲ್ಲೂಕು.

3. ಶ್ರೀ ಪಿ.ಕೆ. ರಾಜಪ್ಪ,
ಬಿನ್ ಶ್ರೀ ಕಲ್ಲಪ್ಪ,
45 ವರ್ಷಗಳು,
ವಾಸಃ ಹೊಸಳ್ಳಿ ಗ್ರಾಮ,
ತರೀಕೆರೆ ತಾಲ್ಲೂಕು.

4. ಶ್ರೀ ಜಿ.ಕೆ. ಮಿಥುನ,
ಬಿನ್ ಶ್ರೀ ಕೀರ್ತಿಕುಮಾರ್,
20 ವರ್ಷಗಳು,
ವಾಸಃ ಗೆಜ್ಜೆಗೊಂಡನಹಳ್ಳಿ ಗ್ರಾಮ,
ಅಜ್ಜಂಪುರ ತಾಲ್ಲೂಕು.

5. ಶ್ರೀಮತಿ ಗಂಗಮ್ಮ,
ಕೋಂ ಶ್ರೀ ಕೀರ್ತಿಕುಮಾರ್,
ಯಾನೆ ಕುಮಾರಪ್ಪ,
45 ವರ್ಷಗಳು,
ವಾಸಃ ಗೆಜ್ಜೆಗೊಂಡನಹಳ್ಳಿ ಗ್ರಾಮ,
ಅಜ್ಜಂಪುರ ತಾಲ್ಲೂಕು.

6. ಶ್ರೀ ಜಿ. ಕುಮಾರಪ್ಪ,
ಯಾನೆ ಕೀರ್ತಿಕುಮಾರ್,
ಬಿನ್ ಶ್ರೀ ಈಶ್ವರಪ್ಪ,
50 ವರ್ಷಗಳು,
ವಾಸಃ ಗೆಜ್ಜೆಗೊಂಡನಹಳ್ಳಿ ಗ್ರಾಮ,
ಅಜ್ಜಂಪುರ ತಾಲ್ಲೂಕು.

7. ಶ್ರೀ ಹೆಚ್.ಓ. ಪ್ರವೀಣ್,
ಬಿನ್ ಶ್ರೀ ಓಂಕಾರಪ್ಪ,
40 ವರ್ಷಗಳು,
ವಾಸಃ ಹುಣಸಘಟ್ಟ ಗ್ರಾಮ,
ಅಜ್ಜಂಪುರ ತಾಲ್ಲೂಕು.

8. ಶ್ರೀ ಹೆಚ್.ಎನ್. ಪ್ರದೀಪ,
ಬಿನ್ ಶ್ರೀ ನಾಗರಾಜಪ್ಪ,
65 ವರ್ಷಗಳು,
ವಾಸಃ ಹುಣಸಘಟ್ಟ ಗ್ರಾಮ,
ಅಜ್ಜಂಪುರ ತಾಲ್ಲೂಕು.

## ದೋಷಾರೋಪಣೆ

ಶ್ರೀ. ರಾಹುಲ್ ಶೆಟ್ಟಿಗಾರ್, ಬಿ.ಕಾಂ.(Hons.), ಎಲ್‌ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾದಂ., ತರೀಕೆರೆ ಆದ ನಾನು ಆರೋಪಿಗಳಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕ 24.01.2022 ರಂದು ಬೆಳಿಗ್ಗೆ 11.00 ಗಂಟೆಗೆ ಅಜ್ಜಂಪುರ ಪೋಲೀಸ್ ಠಾಣಾ ಸರಹದ್ದಿನ ಹೊಸಹಳ್ಳಿ ಗ್ರಾಮದಲ್ಲಿ ಚಾಸಾ-1/ ಶ್ರೀಮತಿ ಜಯಮ್ಮ ಮತ್ತು ಚಾಸಾ-4/ ಶ್ರೀ ಹೆಚ್.ಎಸ್.ತಮ್ಮಪ್ಪ ರವರು ಸರ್ವೇ ನಂಬರ್ 13 ರಲ್ಲಿನ ಜಮೀನಿಗೆ ಹೋದಾಗ ಆರೋಪಿತರಾದ ನೀವುಗಳು ಅಪರಾದ ಮಾಡುವ ಏಕೋದ್ದೇಶದಿಂದ ಸದರಿ ಜಮೀನಿಗೆ ಅತಿಕ್ರಮಪ್ರವೇಶ ಮಾಡಿರುತ್ತೀರಿ. ಈ ರೀತ್ಯ 1 ರಿಂದ 8 ನೇ ಆರೋಪಿಗಳಾದ ನೀವು ಭಾರತ ದಂಡ ಸಂಹಿತೆ ಕಲಂ 447 ಸಹವಾಚಕ ಕಲಂ 149 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1 ರಿಂದ 8 ನೇ ಆರೋಪಿಗಳಾದ ನೀವುಗಳು ಅಪರಾದ ಮಾಡುವ ಏಕೋದ್ದೇಶದಿಂದ ಮುಂದುವರಿದು, ಚಾಸಾ-1 ಮತ್ತು 4 ರವರನ್ನು ಅಡ್ಡಗಟ್ಟಿರುತ್ತೀರಿ. ಈ ರೀತ್ಯ 1 ರಿಂದ 8 ನೇ ಆರೋಪಿಗಳಾದ ನೀವು ಭಾರತ ದಂಡ ಸಂಹಿತೆ ಕಲಂ 341 ಸಹವಾಚಕ ಕಲಂ 149 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1 ರಿಂದ 8 ನೇ ಆರೋಪಿಗಳಾದ ನೀವುಗಳು ಅಪರಾದ ಮಾಡುವ ಏಕೋದ್ದೇಶದಿಂದ ಮುಂದುವರಿದು, ಚಾಸಾ-1 ಮತ್ತು 4 ರವರಿಗೆ ಈ ಜಮೀನು ನಮಗೆ ಸೇರಿದ್ದು ಸೂಳೆಮಕ್ಕಳ, ಬೋಳಿಮಕ್ಕಳ ಎಂದು ಅವರ ಶಾಂತಿಭಂಗ ಮಾಡುವ ಉದ್ದೇಶದಿಂದ ಅವಾಚ್ಯ ಶಬ್ದಗಳಿಂದ ಬೈದು ಅವಮಾನಿಸಿರುತ್ತೀರಿ. ಈ ರೀತ್ಯ

1 ರಿಂದ 8 ನೇ ಆರೋಪಿಗಳಾದ ನೀವು ಭಾರತ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 149 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1 ರಿಂದ 8 ನೇ ಆರೋಪಿಗಳಾದ ನೀವುಗಳು ಅಪರಾದ ಮಾಡುವ ಏಕೋದ್ದೇಶದಿಂದ ಮುಂದುವರಿದು, ಚಾಸಾ-1 ಮತ್ತು 4 ರವರಿಗೆ ಈ ಜಮೀನಿಗೆ ಕಾಲಿಟ್ಟರೆ ನಿಮ್ಮನ್ನು ಕೊಲೆ ಮಾಡದೆ ಬಿಡುವುದಿಲ್ಲವೆಂದು ಕೊಲೆ ಬೆದರಿಕೆ ಹಾಕಿರುತ್ತೀರಿ. ಈ ರೀತ್ಯ 1 ರಿಂದ 8 ನೇ ಆರೋಪಿಗಳಾದ ನೀವು ಭಾರತ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 149 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಸದರಿ ಮೇಲ್ಕಂಡ 1 ರಿಂದ 8 ನೇ ಆರೋಪಿಗಳಾದ ನೀವು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮೇಲೆ ಹೇಳಿದ ಅಪರಾದಗಳನ್ನು ಮಾಡಿದ್ದರಿಂದ, ಅವುಗಳು ಈ ನ್ಯಾಯಾಲಯದಿಂದ ವಿಚಾರಣೆ ಆಗತಕ್ಕದ್ದೆಂದು ಆದೇಶಿಸಲಾಗಿದೆ.

ಪ್ರ:1. ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದಿರಾ? ಅವುಗಳು ನಿಮಗೆ ಅರ್ಥವಾಯಿತೇ?

ಆರೋಪಿಗಳ ಉತ್ತರಃ

ಆರೋಪಿ 1: Yes

ಆರೋಪಿ 2: Yes

ಆರೋಪಿ 3: Yes

ಆರೋಪಿ 4: Yes

ಆರೋಪಿ 5: Yes

ಆರೋಪಿ 6: Yes

ಆರೋಪಿ 7: Yes

ಆರೋಪಿ 8: Yes

ಪ್ರ:2. ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಆರೋಪಿಗಳ ಉತ್ತರಃ

ಆರೋಪಿ 1: Pleaded not guilty and claimed to be tried

ಆರೋಪಿ 2: Pleaded not guilty and claimed to be tried

ಆರೋಪಿ 3:  Pleaded not guilty and claimed to be tried
ಆರೋಪಿ 4:  Pleaded not guilty and claimed to be tried
ಆರೋಪಿ 5:  Pleaded not guilty and claimed to be tried
ಆರೋಪಿ 6:  Pleaded not guilty and claimed to be tried
ಆರೋಪಿ 7:  Pleaded not guilty and claimed to be tried
ಆರೋಪಿ 8:  Pleaded not guilty and claimed to be tried

(ಆರೋಪಿತರಿಗೆ ದೋಷಾರೋಪಣೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ತಿಳಿಸಿ ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣಿಕರಿಸುತ್ತೇನೆ)

ದಿನಾಂಕ : 21.02.2025

ಸಹಿ/-
(ರಾಹುಲ್ ಶೆಟ್ಟಿಗಾರ್)
ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ
ಪ್ರ.ದ.ನ್ಯಾದಂ., ತರೀಕೆರೆ.

ಆರೋಪಿತರ ಸಹಿಃ